# ಅಳಿಲು ಕಾಟಕ್ಕೆ ಬಟ್ಟಲು ಕಟ್ಟೆ

ಅಳಿಲುಗಳ ಹಾವಳಿಯಿಂದ ಮುಕ್ತಿಗೆ ಅಡಕೆ ಬೆಳೆಗಾರರು ಈಗಾಗಲೇ ಹತ್ತಾರು ಪ್ರಯೋಗಗಳನ್ನು ಕೈಗೊಂಡಿದ್ದಾರೆ. ಆದರೆ ಅವೆಲ್ಲವೂ ದುಬಾರಿ ಮತ್ತು ಹೇಳಿಕೊಳ್ಳುವಷ್ಟರ ಮಟ್ಟಿಗೆ ಯಶಸ್ಸನ್ನು ಪಡೆದಿಲ್ಲ. ಚೆನ್ನಗಿರಿಯ ಅಡಕೆ ಬೆಳೆಗಾರ ರಾಕೇಶ್ ಎಂಬುವರು ಕಳೆದ ಎಂಟು ವರ್ಷಗಳ ಹಿಂದೆ ತಮ್ಮ ಮೂರು ಎಕರೆ ಅಡಕೆ ತೋಟದಲ್ಲಿ ಮೂವತ್ತು ಬಟ್ಟಲನ್ನು ಸರಿಗೆಯ ಸಹಾಯದಿಂದ ಅಡಕೆ ಮರಕ್ಕೆ ಕಟ್ಟಿದ್ದಾರೆ. ಗಾಳಿ ಬೀಸುವಾಗ ಬಟ್ಟಲು ಗಿಡಕ್ಕೆ ತಾಗಿ ಶಬ್ದವಾಗುತ್ತದೆ. ಈ ಶಬ್ದಕ್ಕೆ ಅಳಿಲುಗಳು ಅತ್ತ ಸುಳಿಯುವುದೆ ಇಲ್ಲವಂತೆ. ಇದರ ಖರ್ಚು ಕೂಡಾ ಕಡಿಮೆ.

**-ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ**





# ಬಳ್ಳಿಯ ಬಲೆ

ಯಾವುದೇ ಬಳ್ಳಿಗೆ ಎಲೆಗಳು ಇದ್ದೇ ಇರುತ್ತವೆ. ಆದರೆ, ಈ ಚಿತ್ರದಲ್ಲಿ ಬಲೆಯಂತೆ ಹರಡಿಕೊಂಡಿರುವ ಹಳದಿ ಬಣ್ಣದ ಬಳ್ಳಿಗೆ ಎಲೆಗಳೇ ಇಲ್ಲಾ. ರಸ್ತೆಯಂಚಿನ ಹೂಗಿಡದ ತುಂಬಾ ಈ ರೀತಿಯ ಬಳ್ಳಿಗಳು ಕಾಣ ಸಿಕ್ಕಿದ್ದು, ಬೆಂಗಳೂರಿನ ನಗರ ಕೇಂದ್ರ ಗ್ರಂಥಾಲಯದ ಆವರಣದಲ್ಲಿ.

**-ದೀಕ್ಷಾ ದತ್ತಾತ್ರಯ, ಯಲ್ಲಾಪುರ**

# ಅಪರೂಪದ ವಿಗ್ರಹ

ಅಂಬಳೆ ಚಿಕ್ಕಮಗಳೂರಿಗೆ 8 ಕಿ.ಮೀ. ದೂರದಲ್ಲಿರುವ ಒಂದು ಪುರಾತನ ಅಗ್ರಹಾರ. ಇಲ್ಲಿ ಚೆನ್ನಿಗರಾಯ, ಲೋಕೇಶ್ವರ, ವೀರಭದ್ರ ಮತ್ತು ಗೋಪಾಲ ಕೃಷ್ಣನ 4 ದೇವಾಲಯಗಳಿವೆ. ಮೊದಲೆರಡು ದೇವಾಲಯಗಳನ್ನು ಹೊಯ್ಸಳ ಶೈಲಿಯಲ್ಲಿ ನಿರ್ಮಿಸಲಾಗಿದೆ. ವೇಣುಗೋಪಾಲ ಮೂರ್ತಿಯು ಹೊಯ್ಸಳ ಮಾದರಿಯಾಗಿದೆ.

ಈ ದೇವಾಲಯ ಬಹಳ ವಿಶೇಷವಾಗಿದೆ. ಕೃಷ್ಣ, ರುಕ್ಮಿಣಿ, ಸತ್ಯಭಾಮೆ ಒಟ್ಟಿಗೆ ಒಟ್ಟಿಗೆ ಇರುವುದಲ್ಲದೆ ಕೆತ್ತನೆ ಬಹಳ ಸುಂದರವಾಗಿದೆ. ಕೃಷ್ಣಾಷ್ಟಮಿ ಬಹಳ ವಿಶೇಷವಾಗಿ ನಡೆಯುತ್ತದೆ.

**-ಬಿ.ಎಸ್. ರಾಜಲಕ್ಷ್ಮಿ, ಹಾಸನ**

